
ಶಶಿಧರ ಹಳೇಮನಿ

# ಸಮಾಜದ ಹಣ

■ ಪ್ರಕಾಶ ಎಸ್. ಮನ್ನಂಗಿ
ಮೋಟೆಬೆನ್ನೂರು

ಮಹಾತ್ಮ ಗಾಂಧೀಜಿಯವರು ಸಾಬರಮತಿ ಆಶ್ರಮದಲ್ಲಿದ್ದಾಗಿನ ಮಾತು. ಅವರು ಆಗಾಗ ಪ್ರವಾಸಕ್ಕೆಂದು ಹೊರಗೆ ತೆರಳಿ ಸಂಜೆ ಆಶ್ರಮಕ್ಕೆ ವಾಪಸಾಗುತ್ತಿದ್ದರು. ಹೊರಗೆ ಹೋದಾಗಲೆಲ್ಲ ಹರಿಜನೋದ್ಧಾರ ಮತ್ತು ಮಹಿಳೆಯರ ಉದ್ಧಾರಕ್ಕಾಗಿ ದೇಣಿಗೆ ಪಡೆಯುತ್ತಿದ್ದರು. ಆ ಹಣವನ್ನು ಸಂಜೆ ಮನೆಗೆ ಬಂದೊಡನೆ ಅದಕ್ಕಾಗಿ ಇರಿಸಿದ್ದ ಪ್ರತ್ಯೇಕ ಪೆಟ್ಟಿಗೆಯಲ್ಲಿ ಹಾಕಿ ಅದರ ಲೆಕ್ಕ ಬರೆದಿಡುತ್ತಿದ್ದರು. ತಾವು ಹೊರಗೆ ಹೋದಾಗ ಯಾರಾದರೂ ಆಶ್ರಮಕ್ಕೆ ಭೇಟಿ ನೀಡಿ ಕಾಣಿಕೆ ಕೊಟ್ಟರೆ ಆ ಪೆಟ್ಟಿಗೆಯಲ್ಲಿ ತಪ್ಪದೇ ಹಾಕಿ ವರದಿ ಒಪ್ಪಿಸಲು ಕಸ್ತೂರಬಾರವರಿಗೆ ಸೂಚಿಸಿದ್ದರು. ಅದರಂತೆ ಅವರು ಯಾರೇ ಬಂದು ಹಣ ನೀಡಿದರೂ ಪೆಟ್ಟಿಗೆಯಲ್ಲಿ ಹಾಕಿ ವಿವರ ನೀಡುತ್ತಿದ್ದರು. ಗಾಂಧೀಜಿಯವರು ಅವಶ್ಯಕತೆ ಬಿದ್ದಾಗಲೆಲ್ಲ ಆ ಹಣವನ್ನು ಪೆಟ್ಟಿಗೆಯಿಂದ ತೆರೆದು ಸದ್ವಿನಿಯೋಗ ಮಾಡುತ್ತಿದ್ದರು.

ಒಮ್ಮೆ ಅವರು ಹೊರಗೆ ಪ್ರವಾಸಕ್ಕೆ ಹೋಗಿದ್ದಾಗ ವ್ಯಾಪಾರಿಯೊಬ್ಬರು ಆಶ್ರಮಕ್ಕೆ ಬಂದರು. ಆಶ್ರಮದಲ್ಲಿ ನೋಡಿದರೆ ಗಾಂಧೀಜಿಯವರೇ ಇಲ್ಲ. ಅವರಿಗೆ ತುಂಬ ಬೇಜಾರಾಯಿತು. ಆಶ್ರಮದಲ್ಲೆಲ್ಲ ಅಡ್ಡಾಡಿ ನೋಡಿದರು. ಕೊನೆಗೆ ಹೋಗುವಾಗ ಹರಿಜನೋದ್ಧಾರ ಮತ್ತು ಮಹಿಳೆಯರ ಉದ್ಧಾರಕ್ಕಾಗಿ ದೇಣಿಗೆಗಾಗಿ ಇರಿಸಿದ ಪೆಟ್ಟಿಗೆ ಕಾಣಿಸಿತು. ತಾವೂ ಸಾಧ್ಯವಾದಷ್ಟು ಕಾಣಿಕೆ ನೀಡಬೇಕೆನಿಸಿತು. ಜೇಬಿನಿಂದ ಎರಡು ರೂಪಾಯಿ ತೆಗೆದು ಕಸ್ತೂರಬಾರ ಕೈಗೆ ನೀಡಿ, ಗಾಂಧೀಜಿಯವರಿಗೆ ತಾವು ಬಂದ ವಿಷಯ ತಿಳಿಸುವಂತೆ ವಿನಂತಿಸಿದರು.

ಸಂಜೆ ಗಾಂಧೀಜಿಯವರು ಆಶ್ರಮಕ್ಕೆ ಮರಳಿದರು. ಈ ದಿನ ಯಾರಾದರೂ ಆಶ್ರಮಕ್ಕೆ ಬಂದಿದ್ದರೇ? ಎಂದು ಹೆಂಡತಿಯನ್ನು ಕೇಳಿದರು. ಹೌದು ಬಂದಿದ್ದರು ಎಂದು ವಿವರವಾಗಿ ಅವರವರ ಹೆಸರು ಹೇಳಿ ಕೊನೆಗೆ ವ್ಯಾಪಾರಿಯೊಬ್ಬರು ಬಂದಿದ್ದರು. ಅವರು ಎರಡು ರೂಪಾಯಿ ಹರಿಜನೋದ್ಧಾರಕ್ಕಾಗಿ ದೇಣಿಗೆ ನೀಡಿದರು ಎಂದು ತಿಳಿಸಿದರು.

ಗಾಂಧೀಜಿಯವರು ಅವರು ಕೊಟ್ಟ ಹಣವನ್ನು ಪೆಟ್ಟಿಗೆಗೆ ಹಾಕಿದೆಯಾ? ಎಂದು ಪ್ರಶ್ನಿಸಿದರು. ಕಸ್ತೂರಬಾರಿಗೆ ಸರಿಯಾಗಿ ನೆನಪಿಲ್ಲ. ಹಾಕಿರಬೇಕೆಂದು ಭಾವಿಸಿ ಹೂಂ ಎಂದು ಬಿಟ್ಟರು.

ಗಾಂಧೀಜಿಯವರಿಗೆ ಸಂಶಯ ಬಂತು. ಪರಿಶೀಲಿಸೋಣವೆಂದು ಪೆಟ್ಟಿಗೆಯಲ್ಲಿದ್ದ ಹಣವನ್ನು ತೆರೆದು ಎಣಿಸಿ, ಲೆಕ್ಕವನ್ನು ತಾಳೆ ನೋಡಿದರು. ಉಹೂಂ, ಲೆಕ್ಕ ಹೊಂದಾಣಿಕೆಯಾಗಲೇ ಇಲ್ಲ. ಇಲ್ಲ ನೀನು ಪೆಟ್ಟಿಗೆಯಲ್ಲಿ ದುಡ್ಡನ್ನು ಹಾಕಿಯೇ ಇಲ್ಲ ನೆನಪಿಸಿಕೋ ಎಂದು ನುಡಿದು, ಮನೆಯಲ್ಲಿ ಹುಡುಕತೊಡಗಿದರು. ಆ ಹಣ ಅಡಿಗೆ ಮನೆಯ ಡಬ್ಬಿಯಲ್ಲಿತ್ತು. ಅಚಾನಕ್ಕಾಗಿ ಪೆಟ್ಟಿಗೆಗೆ ಹಾಕುವ ಬದಲು ಡಬ್ಬಿಗೆ ಕಸ್ತೂರಬಾರವರು ಹಣ ಹಾಕಿ ಬಿಟ್ಟಿದ್ದರು.

ಗಾಂಧೀಜಿಯವರಿಗೆ ವಿಪರೀತ ಸಿಟ್ಟು ಬಂತು. ಸಮಾಜಕ್ಕಾಗಿ ಕೊಟ್ಟ ದುಡ್ಡು ಅಡಿಗೆ ಮನೆಯಲ್ಲೇಕೆ ಇರಬೇಕು? ಎಂದು ಪ್ರಶ್ನಿಸಿದರು. ಕಸ್ತೂರಬಾರವರು ನಾವೇನು ಬಳಸಿಕೊಂಡಿಲ್ಲವಲ್ಲ. ಈಗ ಹಾಕಿದರಾಯಿತು ಎಂದು ಸಮಾಧಾನ ಮಾಡಲೆತ್ನಿಸಿದರು.

ಗಾಂಧೀಜಿಯವರು ಇದಕ್ಕೆ ಸುತರಾಂ ಒಪ್ಪಲಿಲ್ಲ. ತಪ್ಪು ತಪ್ಪೇ. ಇದು ಹಣದ ತಾತ್ಪೂರ್ತಿಕ ದುರುಪಯೋಗ ಎಂಬ ತೀರ್ಮಾನಕ್ಕೆ ಬಂದರು. ಇದರ ಪಾಯಶ್ಚಿತ್ತಕ್ಕೆಂದು ಗಾಂಧೀಜಿಯವರು ಮರುದಿನ ಉಪವಾಸ ಕೈಕೊಂಡರು. ಕಸ್ತೂರಬಾರವರೂ ಅವರೊಂದಿಗೆ ಉಪವಾಸ ಮಾಡಿದರು. ಹೇಗಿದೆ, ನಮ್ಮ ಮಹಾತ್ಮರ ನಿಷ್ಠೆ? ಸಮಾಜಕ್ಕೆಂದು ವಸೂಲಾದ ಹಣವನ್ನು ನಾವು ಅದರತ್ತ ತಿರುಗಿಯೂ ನೋಡಬಾರದು. ವೈಯಕ್ತಿಕ ಕೆಲಸಗಳಿಗೆ ಬಳಸಲೂಬಾರದು ಎಂಬ ಸಿದ್ಧಾಂತವನ್ನು ಜೀವನುದ್ದಕ್ಕೂ ಅವರು ಪಾಲಿಸಿಕೊಂಡು ಬಂದರು.

ನಾವು ಮತ್ತು ನಮ್ಮ ರಾಜಕಾರಣಿಗಳು ಬಹಳಷ್ಟು ಅರಿಯಬೇಕಾಗಿದೆ ಅಲ್ಲವೇ? ■